‘ವಿಷಯ ಹೌದು. ಆದರೆ, ಒಂದು ಮಾತು ಹೇಳಿ. ಅವನಂತಹ ಲೇಟೆಸ್ಟ್ ಟೆಕ್ನಾಲಜಿ ಗೊತ್ತಿರುವ, ಫ್ಲೋರ್ ಲೆವೆಲ್ ಎಕ್ಸ್‌ಪೀರಿಯೆನ್ಸ್ ಇರುವ, ಗ್ರಾಸ್ಪಿಂಗ್ ಪವರ್ ಚೆನ್ನಾಗಿರುವ, ಹೈ ಎನರ್ಜಿ, ಕಮಿಟ್‌ಮೆಂಟ್ ಎಲ್ಲ ಇರುವವರು ನಮ್ಮಲ್ಲಿ ಬೇರೆ ಯಾರಿದ್ದಾರೆ? ನಾಲ್ಕು ಹುಡುಗರನ್ನು ಸೇರಿಸಿಕೊಳ್ಳೋಣ ಅಂತ ನಾನು ಹೇಳಿದಾಗ ಖರ್ಚು ವೆಚ್ಚಗಳ ಮೇಲೆ ಕಡಿವಾಣ, ಬಜೆಟ್ಟು ಅಂತ ಹೇಳಿದವರು ನೀವು. ಈಗ ಬೇರೆ ಯಾರನ್ನೂ ನಾನು ಬೆಳೆಸಲಿಲ್ಲ ಅನ್ನುವವರೂ ನೀವೇ. ಬೆಳೆಯುವ ಲಕ್ಷಣ ಇದ್ದವರು ಬೇಕಲ್ಲ... ತೇಗವನ್ನು ಮಾತ್ರ ಮರವಾಗಿ ಬೆಳೆದಷ್ಟೂ ಬೆಳೆಸಬಹುದು, ಅಮಟೇಕಾಯಿ ಮರವನ್ನಲ್ಲ. ಗೌರವ್ ಚುರುಕು ಹುಡುಗ. ಅಳೆದು ತೂಗಿದರೆ ಅವನು ನನ್ನ ಕುರ್ಚಿಗೆ ನನಗಿಂತ ಬೆಟರ್ ಕ್ಯಾಂಡಿಡೇಟ್. ನಿಮ್ಮ ಕುರ್ಚಿಗೆ ನಿಮಗಿಂತ ಬೆಟರ್ ಕ್ಯಾಂಡಿಡೇಟ್. ಅದು ಆತನ ಅನುಭವಕ್ಕೂ ಬಂದುದರಿಂದಲೇ ಆತ ಬಿಟ್ಟು ಹೋಗುತ್ತಿದ್ದೇನೆ ಅನ್ನುತ್ತಿದ್ದಾನೆ’ ಮನಸ್ಸಿಗೆ ನಾಟುವ ಹಾಗೆ ಹೇಳಿದ ಮೆನನ್.

ಕೋಪದಿಂದ ಕಂಪಿಸುತ್ತಿದ್ದ ಶರ್ಮಾರ ಬಾಯಿಯಿಂದ ಮಾತು ಹೊರಡಲಿಲ್ಲ. ತಾನು ಎಂ.ಡಿ. ಆಗಿರುವ ಕಂಪೆನಿಯಲ್ಲಿ ತನ್ನ ಕೈಕೆಳಗೆ ಕೆಲಸಮಾಡುವವನೊಬ್ಬ, ಅವನ ಕೈಕೆಳಗೆ ಕೆಲಸಮಾಡುವವನೊಬ್ಬನನ್ನು ತನ್ನ ಕುರ್ಚಿಗೇ ತನಗಿಂತ ಸೂಕ್ತವ್ಯಕ್ತಿ ಅನ್ನುತ್ತಿದ್ದಾನಲ್ಲ!

‘ಅವನು ಹೋಗಲಿ... ಬೇಕಿದ್ದರೆ ನೀನೂ ಹೋಗು... ಯಾರಿಗೆಲ್ಲ ಬಿಟ್ಟು ಹೋಗುವ ಖಯಾಲಿ ಬಂದಿದೆಯೋ, ಅವರೆಲ್ಲ ಹೋಗಿ... ನಾನು ಕಂಪೆನಿ ಮುನ್ನಡೆಸುತ್ತೇನೆ. ಅಷ್ಟು ಧೈರ್ಯ ನನಗಿದೆ. ನಿನ್ನ ಹಾಗೆ ಕೈಚೆಲ್ಲಿ ಕುಳಿತುಕೊಳ್ಳುವುದಿಲ್ಲ ನಾನು. ಕಂಪೆನಿ ಯಾರೊಬ್ಬನ ತಾಳಕ್ಕೂ ಕುಣಿಯುವುದಿಲ್ಲ. ಆದದ್ದಾಗುತ್ತದೆ’ ಎಂದು ಗುಡುಗಿದರು ಶರ್ಮಾ. ಆಮೇಲೆ ತಣ್ಣಗಾಗಿ ಸ್ವಲ್ಪ ಹೊತ್ತು ತಲೆಗೆ ಕೈಯಿಟ್ಟು ಕುಳಿತು ಯೋಚಿಸಿ, ಮತ್ತೆ ಮೆಲ್ಲನೆ ‘ಅವನಿಲ್ಲದ ಪಕ್ಷದಲ್ಲಿ ನಾವೇನು ಮಾಡಬಹುದು ಅಂತ ಯೋಚಿಸು... ಒಂದು ನೀಲಿನಕ್ಷೆ ತಯಾರು ಮಾಡು... ಇಬ್ಬರೂ ಕುಳಿತು ಚರ್ಚಿಸೋಣ. ಒಂದು ‘ಪ್ಲಾನ್ ಬಿ’ ರೆಡಿ ಮಾಡೋಣ. ಒಂದಿಬ್ಬರು ಹುಡುಗರನ್ನು ಹೊಸದಾಗಿ ಸೇರಿಸಿಕೊಳ್ಳೋಣ. ನಾನು ಕಂಪೆನಿ ಮಾಲೀಕರಲ್ಲಿಯೂ ಮಾತಾಡುತ್ತೇನೆ. ಒಬ್ಬ ಹುಡುಗನ ಎದುರು ಇಷ್ಟು ಸುಲಭದಲ್ಲಿ ಸೋಲೊಪ್ಪಿಕೊಳ್ಳುವುದು ನಮ್ಮಂಥವರಿಗೆ ಭೂಷಣ ಅಲ್ಲ’ ಎಂದರು ಶರ್ಮಾ.

‘ಘನತೆ, ಗೌರವ ನೋಡಿಕೊಂಡು ಕುಳಿತುಕೊಳ್ಳುವ ಕಾಲ ಇದಲ್ಲ ಸರ್... ಇದನ್ನೊಂದು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಡಿ. ನಿಮಗಿನ್ನೂ ಎರಡು ವರ್ಷದ ಸರ್ವೀಸು ಇದೆ. ನನಗೆ ಹತ್ತು ವರ್ಷದ ಸರ್ವೀಸು ಇದೆ. ಹದಿನೈದು ವರ್ಷ ಒಟ್ಟಿಗೆ ಕೆಲಸ ಮಾಡಿದವರು ನಾವು. ನಿಮ್ಮ ಒಳಿತೆಲ್ಲಿದೆ, ನನ್ನ ಒಳಿತೆಲ್ಲಿದೆ ಎನ್ನುವುದನ್ನು ಒಟ್ಟಿಗೆ ಇಟ್ಟೇ ಚಿಂತಿಸುವವನು ನಾನು. ಆತನನ್ನು ಉಳಿಸಿಕೊಂಡರೆ ಯಾವ ಒತ್ತಡವೂ ಇಲ್ಲದೆ ಕಂಪೆನಿ ಒಳ್ಳೆಯ ಫಲಿತಾಂಶ ಕೊಡುತ್ತ ಹೋಗುತ್ತದೆ. ಅವನಿಗೆ ಕೊಡುವ ಇನ್‌ಕ್ರಿಮೆಂಟು ನಿಮ್ಮ ಅಥವಾ ನನ್ನ ಕಿಸೆಯಿಂದ ಹೋಗುವುದಲ್ಲವಲ್ಲ... ಮ್ಯಾನೇಜ್‌ಮೆಂಟಿನವರಲ್ಲಿ ಮಾತಾಡಿ ನೋಡಿ. ಅವರು ಒಪ್ಪಿಕೊಂಡರೆ, ಅವಕಾಶ ಸಿಕ್ಕಿದಾಗ ನಮ್ಮನಮ್ಮ ಶ್ರೇಣಿ ಉಳಿಸಿಕೊಳ್ಳುವ ನೆಪದಲ್ಲಿ ನಮಗೂ ಏನಾದರೂ ಕಾಫಿ ಕಾಸು ಜಾಸ್ತಿ ಮಾಡಿಸಿಕೊಳ್ಳುವ ಪ್ರಯತ್ನ ಮಾಡಿ... ಹೊರಗೆ ಜಾಬ್ ಮಾರ್ಕೆಟ್ ಹಾಗಿದೆ ಅನ್ನಿ. ಜ್ಯೂನಿಯರ್ ಒಬ್ಬ ಅಷ್ಟು ಕೇಳುತ್ತಾನೆ, ಆ ಲೆಕ್ಕದಲ್ಲಿ ನಮಗೂ ಜಾಸ್ತಿ ಸಿಗಬೇಕಾದ್ದು ನ್ಯಾಯ ಅನ್ನಿ... ಕೊಟ್ಟರೆ ನಮ್ಮ ಮಕ್ಕಳ ಪುಣ್ಯ... ಕೊಡದಿದ್ದರೂ ಸರಿಯೇ... ಟಾರ್ಗೆಟ್ಟು, ಟರ್ನೋವರು, ಬಜೆಟ್ಟು, ಮಾರ್ಜಿನ್ನು ಅಂತ ತಲೆಕೆಡಿಸಿಕೊಳ್ಳಲು